
ಫೋಟೊದಲ್ಲಿಯೇ ಕಣ್ಣನ್ನು ನೆಟ್ಟು, ಏನನ್ನೋ ಧ್ಯಾನಿಸುತ್ತ ಒಂದು ಕ್ಷಣ ಅಂತರ್ಮುಖಿಯಾದರು. ಆಡಿಟ್ ಪಾರ್ಟಿಯವರು ರಿಪೋರ್ಟ್‌ನ ಕೊನೆಯ ಪ್ಯಾರಾದಲ್ಲಿ ಎತ್ತಿದ ಆ ಸಣ್ಣ ಆಕ್ಷೇಪಣೆಗೆ ಸಮರ್ಥ ಉತ್ತರ ಕೊಡುವುದು ಅವರಿಗೇನೂ ದೊಡ್ಡ ಸಮಸ್ಯೆ ಆಗಿರಲಿಲ್ಲ. ಅದಕ್ಕಾಗಿ ಅವರೇನೂ ಹೆಚ್ಚು ತಲೆ ಕೆಡಿಸಿಕೊಂಡಿರಲಿಲ್ಲ. ಆದರೆ, ಆ ಆಕ್ಷೇಪಣೆಯ ಮೂಲಕವೇ ಅವರೀಗ, ತಾವು ಹಿಂದಿನ ವರ್ಷ ಮಕ್ಕಳಿಗಾಗಿ ವಿನೂತನ ಕಾರ್ಯಕ್ರಮವೊಂದನ್ನು ನಿರ್ಮಿಸುವಾಗ ತೆಗೆದುಕೊಂಡ ಶ್ರಮ ಮತ್ತು ಪಡೆದ ಆನಂದದ ಭಾವಲೋಕದಲ್ಲಿ ಮುಳುಗಿ ಹೋಗಿಬಿಟ್ಟಿದ್ದರು.

★★★

ಕಲ್ಕತ್ತಾದಂಥ ದೊಡ್ಡ ನಗರದ ಶಾಲೆಗಳಲ್ಲಿ ಕಲಿಯುವ ಮಕ್ಕಳಿಗೆ, ಹುಲಿಯ ವಿವಿಧ ಬಗೆಯ ವರ್ತನೆಯನ್ನು ಕುರಿತು ಅದರ ನಿಜವಾದ ಘರ್ಜನೆಯ ಮೂಲಕವೇ ತಿಳಿಸುವ ಉದ್ದೇಶದಿಂದ ಕಾರ್ಯಕ್ರಮವೊಂದನ್ನು ನಿರ್ಮಿಸಲು ಹೊರಟಿದ್ದರು ಡಾ. ಸತ್ಯಾರ್ಥಿ ಚಟರ್ಜಿ. ಕಾರ್ಯಕ್ರಮ ಅಧಿಕಾರಿಯಾಗಿದ್ದಾಗಿನಿಂದಲೂ ವಿಭಿನ್ನ ಹಾಗೂ ವಿನೂತನ ಕಾರ್ಯಕ್ರಮಗಳನ್ನು ನಿರ್ಮಿಸುವಲ್ಲಿ ಇದ್ದ ಅವರ ಆಸಕ್ತಿ ನಿರ್ದೇಶಕ ಹುದ್ದೆಗೇರಿದಾಗ ಕೂಡ ಎಳ್ಳಷ್ಟೂ ಕಡಿಮೆಯಾಗಿರಲಿಲ್ಲ. ಉನ್ನತ ಆಡಳಿತಾಧಿಕಾರದ ಚುಕ್ಕಾಣಿ ಹಿಡಿದಿದ್ದರೂ, ತಮ್ಮ ಓದು, ಬರವಣಿಗೆ, ಕಾರ್ಯಕ್ರಮಗಳ ನಿರ್ಮಾಣವೇ ಮೊದಲಾದ ಸೃಜನಶೀಲ ಕೆಲಸಗಳಲ್ಲಿ ಅವರೆಂದೂ ಹಿಂದೆ ಬಿದ್ದಿರಲಿಲ್ಲ. ತಮ್ಮ ಅಧೀನದಲ್ಲಿದ್ದ ಕೆಲವು ಸೋಂಬೇರಿ ಅಧಿಕಾರಿಗಳಿಗೆ ಸರಿಯಾದ ಪಾಠ ಕಲಿಸುತ್ತಿದ್ದ ಅವರು ಆ ಪಾಠಗಳಿಗೆ ಪಠ್ಯವಾಗುವ ರೀತಿಯಲ್ಲಿ ಪ್ರಸಾರಕ್ಕಾಗಿ ಸ್ವತಃ ತಾವೇ ವಿನೂತನ ಕಾರ್ಯಕ್ರಮಗಳನ್ನು ನಿರ್ಮಿಸುತ್ತಿದ್ದುದುಂಟು. ಆದರೆ, ಪದೋನ್ನತಿಯ ಅನಂತರ ಉನ್ನತ ಅಧಿಕಾರದ ಜವಾಬ್ದಾರಿ ಹೊತ್ತ ಕಾರಣಕ್ಕಾಗಿ ಮೊದಲಿನಂತೆ ಹೆಚ್ಚು ಕಾರ್ಯಕ್ರಮಗಳನ್ನು ನಿರ್ಮಿಸುವುದು ಅವರಿಗೆ ಸಾಧ್ಯವಾಗುತ್ತಿರಲಿಲ್ಲ. ಆದರೂ ಆಗೊಮ್ಮೆ ಈಗೊಮ್ಮೆ ಕಾರ್ಯಕ್ರಮಗಳನ್ನು ನಿರ್ಮಿಸುವುದನ್ನು ಮಾತ್ರ ಅವರು ಬಿಟ್ಟಿರಲಿಲ್ಲ. ಈ ಕಾರ್ಯಕ್ರಮ ನಿರ್ಮಿತಿ ಮಾತ್ರ ಅವರಿಗೆ ಅತ್ಯಂತ ಖುಷಿ ನೀಡಿದ್ದಾಗಿತ್ತು.



'ಶಾಲೆಗೆ ಬಂತು ಹುಲಿ' ಎಂಬ ಹೆಸರಿನಲ್ಲಿ ಡಾ. ಸತ್ಯಾರ್ಥಿ ಚಟರ್ಜಿ ಅವರು ಒಂದು ವಿನೂತನ ಕಾರ್ಯಕ್ರಮ ನಿರ್ಮಿಸಿ, ಅದನ್ನು ಮಕ್ಕಳಿಗೆ ಕೇಳಿಸುವಂತೆ ಶಿಕ್ಷಣ ಇಲಾಖೆಯ ಅಧಿಕಾರಿಗಳಿಗೆ ವಿನಂತಿ ಮಾಡಿದಾಗ, ಸರಕಾರದಿಂದ ಬಂದ ಪ್ರತಿಕ್ರಿಯೆ ಅದ್ಭುತವಾಗಿತ್ತು. ಹುಲಿಯನ್ನು ಚಿತ್ರಗಳಲ್ಲಿ ಮಾತ್ರ ನೋಡುತ್ತಿದ್ದ ನಗರದ ಶಾಲಾ ಮಕ್ಕಳಿಗೆ ಜೀವಂತ